Regd No B G 155 Sri- 14—4—1965

ಸತ್ಯವಾದಿ

48 th Year
Satyavadi
DAILY
MYSORE 4

ಸಂಸ್ಥಾಪಕರು – ಅರಮನೆ ಸಂಸ್ಥೇದಾರ್ ಎಂ.ಎ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2ಪೈಸೆ

ಸೈಕಲ್ ಕಾದಾಟ ರದ್ದು

ಬೆಂಗಳೂರು ಮುನಿಸಿಪಲ್ ಬಡ್ಜೆಟ್ ರೂ 4 ಲಕ್ಷ ಉಳಿತಾಯ ಹೊಂದಿದೆ : ಹೊಸ ತೆರಿಗೆಗಳೇನೂ ಇಲ್ಲ : ಬೈಸಿಕಲು ತೆರಿಗೆ ವಜಾ ಆಗಿದೆ.

★

ಹಿಡುವಳಿ

ಬೆಂಗಳೂರು— ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ಭೂ ಸುಧಾರಣಾ ಶಾಸನದಲ್ಲಿ ಈಗಿರುವ ಹಿಡುವಳಿ 27 ಎಕ್ರೆ ಎಂದೂ, ಮುಂದೆ ಪಡೆಯುವುದು 18 ಎಕ್ರೆಗಳೆಂದೂ ನಮೂದಿಸಲಾಗಿದೆ.

★

ಆತ್ಮಾರ್ಪಣೆ ಮಾಡಿರುವ ಬಗ್ಗೆ

ಕಂಜಾಪುರ— ಈಚೆಗೆ ನಡೆದ ಹಿಂದಿ ವಿರುದ್ಧ ಚಳವಳಿಯಲ್ಲಿ ಮೈಗೆ ಸೀಮೆಎಣ್ಣೆ ಹೊಯ್ದುಕೊಂಡು ಸುಟ್ಟುಕೊಂಡು ಆತ್ಮಾರ್ಪಣೆ ಮಾಡಿದ ಸಾರಂಗಪಾಣಿಯ ತಾಯಿತಂದೆಗಳಿಗೆ 5000 ರೂಗಳ ನಿಧಿ ಅರ್ಪಿಸಲಾಯಿತು ; ಈ ನಿಧಿಯನ್ನು ಸಾರಂಗಪಾಣಿಯ ಸ್ಮಾರಕ ಎಂಡೋಮೆಂಟಾಗಿಟ್ಟು ತಮಿಳು ವಿದ್ಯಾರ್ಥಿಗಳಲ್ಲಿ ಉತ್ಸವ ಭಾಷಣ ಮಾಡುವವರಿಗೆ ಬಹುಮಾನ ಕೊಡಲು ಉಪಯೋಗಿಸಲಾಗುವುದು — ಚಿದಂಬರಂ ಹಿಂದೀ ವಿರುದ್ಧ ಚಳವಳಿಯಲ್ಲಿ ಪೋಲೀಸರ ಗುಂಡಿನೇಟಿಗೆ ಬಲಿಯಾದ ರಾಜೇಂದ್ರನಿನ ತಾಯಿತಂದೆಗಳಿಗೆ 1000 ರೂಗಳ ನಿಧಿ ಅರ್ಪಿಸಲಾಯಿತು

═

ವಿಯೆಟ್‌ನಾಮಿಗೆ ಅಮೆರಿಕಾ ರೇಡಂ ವಿಮಾನ ಕಳಿಸಲು ಪರ್ಯಾಲೋಚಿಸುತ್ತಿರುವುದಾಗಿ ವಾಷಿಂಗ್ಟನ್ ವಾರ್ತೆ.

★

ನಾಳೆಯ ಪಂಚಾಂಗ

ವೈವಜ್ಞ ಶಿಖಾಮಣಿ
ಅಸ್ಥಾನವಿದ್ವಾನ್ ಧರ್ಮಾಧಿಕಾರಿ
ರಂಜಕಾರಾತ್ಯಬೆಕ್ಕ, ಜ್ಯೋತಿರ್ವಿದ್ವನ್ಮಣಿ
ಪಂಡಶ್ಯ ಕೃಷ್ಣಜೋಯಿಸರಿಂದ

15 ಗುರುವಾರ ಪೂರ್ಣಿಮೆ ಹಸ್ತ

ಸಮಾಚಾರ ಸಂಗ್ರಹ

ಹಿಂದಿ ಅಧಿಕೃತ ಭಾಷೆ ಆಗಿರುವುದರಿಂದ ಅಂಚೆ ಚೀಟಿಗಳಲ್ಲೂ ಹಿಂದಿ ಭಾಷೆ ಉಪಯೋಗಿಸಲಾಗುವುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಮಮ್ಮದಿನಿಂದ ಬಂದ ವಾರ್ತೆ ಚಿನಾಬ್ ಮತ್ತು ಜಂಗಾರ್ ಭಾಗಗಳಲ್ಲಿ ಅಕ್ರಮ ಪ್ರವೇಶ ಮಾಡಿದ ಆರುಜನ ಪಾಕಿಸ್ತಾನಿಗಳು ಭಾರತದ ಗಡಿ ಉಸ್ತುವಾರಿ ಪಡೆಯವರು ಗುಂಡಿಟ್ಟುಕೊಂಡರು.

ಬೆಂಗಳೂರು— ದೇಶದ ರಾಜಕೀಯ ಸ್ವಾತಂತ್ರ್ಯತೆ ಉಳಿಯುವುದು ವಿಜ್ಞಾನ ಮತ್ತು ವಿಜ್ಞಾನ ಸಂಶೋಧನೆಯನ್ನು ಅನುಸರಿಸಿದೆ ಎಂದು ನೋಬಲ್ ಪ್ರೈಜು ಪಡೆದಿರುವ ಡಾ| ಸಿ ವಿ ರಾಮನ್ ಹೇಳಿದರು.

ಬ್ಯಾಂಕಿಂಗ್ ವ್ಯವಹಾರ ಸಹಸದೃಶ ಕೇವಲ ಡಿವಾಜಿಟ್ಟುಗಳನ್ನು ಸ್ವೀಕರಿಸಿ, ಸಾಲ ಕೊಡುವ ಬ್ಯಾಂಕುಗಳ ಮೇಲೆ ಸಂಕಷ್ಟ ಹತೋಟಿ ಹೊಂದಿಲ್ಲ ಎಂದು ನವದೆಹಲಿ ವಾರ್ತೆ

ಚಕಾಗೋನಿಂದ ಬಂದಿರುವ ವರದಿ. ಅಮೆರಿಕದ ಮಧ್ಯ ಪಶ್ಚಿಮ ಭಾಗದ 6 ರಾಜ್ಯಗಳಲ್ಲಿ ಟಾರ್ನೆಡೊ ಹಾವಳಿಯಿಂದ ನೂರೆಂಟತ್ತು ಮಂದಿ ಸತ್ತು ಸಾವಿರಾರು ಮಂದಿ ಗಾಯಗೊಂಡರು. ಇಂಡಿಯಾನ ತೀವ್ರ ನಷ್ಟಗೊಂಡಿದೆ.

ನವ ಚೀನಾದ ಭೀತಿ ಮುಟ್ಟಿಹಾಕಬೇಕೆಂಬುದೇ ಅಮೆರಿಕಾದ ನೀತಿ ಎಂದು ಅಮೆರಿಕಾದ ರಾಯಭಾರಿ ಚೆಸ್ಟರ್ ಬೌಲ್ಸ್‌ರವರು ನವದೆಹಲಿಯಲ್ಲಿ ಸೂಚಿಸಿದರು. ವಿಶ್ವದ ಶಾಂತಿ ಮತ್ತು ಅಭ್ಯುದಯಕ್ಕೆ ಹದಿನೇಳು ಶಟಸ್ಥ ದೇಶಗಳು ಮುಂದಾಗಿ ಬಂದಿರುವುದಕ್ಕೆ ಅವರು ಪ್ರಶಂಸಿಸಿದರು

ಭಾರತಕ್ಕೆ ಸೂಪರ್‌ಸಾನಿಕ್ ಎರ್ ಕ್ರಾಫ್ಟ್‌ಗಳು ಬೇಕೆಂದು ಅಮೆರಿಕಕ್ಕೆ ತಿಳಿಸಿರುವುದಾಗಿಯೂ ಯಾವ ನಿರ್ಧಾರ ಅಲ್ಲಿಂದ ಬಂದಿಲ್ಲವೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು ಆ ವಿಮಾನಗಳ ಸಂಬಂಧಾಜ್ಞಾ ಅಮೆರಿಕಾದಿಂದ ಆಗಲಾರದೆಂದು ಊಹಿಸಲಾಗಿದೆ.

ವಾಮು ಕಮ್ಯೂನಿಸ್ಟರ ಬಿಡುಗಡೆಗೆ ಮತ್ತು ಕೇಂದ್ರದಲ್ಲಿ ಸಂಯುಕ್ತ ಪ್ರತಿಪಕ್ಷ ಸರ್ಕಾರ ಅಡಳಿತ ಸುಗಮವಾಗಿ ನಡೆಯುವಂತೆ ಮಾಡಲು ಭಾರತ ಕಮ್ಯೂನಿಸ್ಟ್ ಪಾರ್ಟಿ ನಿರ್ಧರಿಸಿದೆ

ಟೋಕಿಯೋದಿಂದ ಬಂದಿರುವ ವರದಿ ಏಷ್ಯಾವಿನಲ್ಲಿ ಹುಟ್ಟಿ ನಿಲ್ಲಿಸುವ ವಿಚಾರದಲ್ಲಿ ಯಾವ ಪರಿಹಾರವೂ ಇಲ್ಲದೆ ಮಾತುಕತೆ ನಡೆಯಬೇಕೆಂಬ ಅಧ್ಯಕ್ಷ ಜಾನ್ಸನ್‌ರವರ ಕರೆಯನ್ನು ಚೀನಾ ತಿರಸ್ಕರಿಸಿದೆ. ಅಲ್ಲಿಂದ ಅಮೆರಿಕಾ ಸೇನೆ ವಾಪಸಾಗಬೇಕೆಂಬ ತನ್ನ ಕೇಳಿಕೆಯನ್ನು ಮತ್ತೆ ಒತ್ತಾಯ ಮಾಡಿದೆ.

ಲಂಡನ್‌ನಿನಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆಯಾನಂತರ ಉತ್ತಮಗೊಳ್ಳುತ್ತಿರುವ ಭಾರತ ರಾಷ್ಟ್ರಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರೊಡನೆ ಬ್ರಿಟಿಷ್ ಪ್ರಧಾನಾದ ಕೆಂಬಲ್ಲು ವಿಲ್ಸನರು ಭೇಟಿಮಾಡಿದರೆಂದು ಲಂಡನ್ ವಾರ್ತೆ

ಫಿರೋಜಾಪುರ— ಭಾರತದ ಅಧಿಕೃತ ಸ್ಥಿತಿಯನ್ನು ಶಕಲೆಕಲಕ ಮಾಡಲು 100 ರೂಗಳ ಕೃತಕ ನೋಟುಗಳ ರಾಶಿಯು ಜಲಾವಣೆಗೆ ಸುಗಿಸಲು ಸಡೆಯುತ್ತಿರುವ ಪಾಕಿಸ್ತಾನಿ ಪಿತೂರಿಯನ್ನು ಪೋಲೀಸರು ಪತ್ತೆಹಚ್ಚಿರುವರು

ಬೂ ಕಂದಾಯ ಹೆಚ್ಚಿಸುವ ವಿಷಯದಲ್ಲಿ

ಬೆಂಗಳೂರು— ಭೂಕಂದಾಯ ಹೆಚ್ಚಿಸುವ ವಿಷಯದಲ್ಲಿ ಸರಕಾರ ಯಾವ ದೃಢ ನಿರ್ಧಾರವನ್ನೂ ತೆಗೆದುಕೊಂಡಿಲ್ಲವೆಂದು ಹೇಳಲಾಗಿದೆ

ನವದೆಹಲಿ— ತ್ರಿಪುರಾದ ಜಾಲಯಾಗ್ರಾಮದಲ್ಲಿ 5 ಮೈಲಿ ಸ್ಥಳವನ್ನು ಪಾಕಿಸ್ತಾನಿಗಳು ಅಕ್ರಮಿಸಿರುವುದಾಗಿಯೂ, ಅಲ್ಲಿ ಪಾಕಿಸ್ತಾನಿ ಪಡೆಗಳನ್ನು ಶೀಘ್ರದಿ ಸುತ್ತುವರೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

★

ನವದೆಹಲಿ— ಪಾಕಿಸ್ತಾನದಿಂದ ಕಚ್‌ನಲ್ಲಿ ಎಂಡು ಪೋಸ್ಟ್‌ಗಳು ಭಾರತದ ವಶವಾಗಿದೆಯೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು — 2 ದಿನಗಳ ಶಾಂತಿ ಪರಿಸ್ಥಿತಿಯ ನಂತರ ಪಾಕಿಸ್ತಾನಿ ಸೈನಿಕರು ಮತ್ತೆ ಭಾರತದ ಗಡಿಯ ಕಡೆಗೆ ಗುಂಡುಹಾರಿಸುತ್ತಿರುವರೆಂದೂ ಹೇಳಲಾಯಿತು.

ನವದೆಹಲಿ— ದೌರ್ಜನ್ಯ ತಾಗಾಗಿಗಳು ಗಡಿ ಹತ್ತಿರ ಸೇರುತ್ತಿರುವರೆಂದೂ ಗಡಿ ಪ್ರದೇಶದಲ್ಲಿ ಭೀತಿಯುಂಟಾಗಿದೆ ಎಂದೂ ವಿದೇಶ ವಿಚಾರ ಮಂತ್ರಿ ಶ್ರೀ ಸ್ವರ್ಣಸಿಂಗರು ಹೇಳಿರುವರು.

ನವದೆಹಲಿ— ಪಾಕಿಸ್ತಾನವು ಗುಜರಾತಿನಲ್ಲಿ ಆಕ್ರಮಣಕಾರಿ ಕಾರ್ಯ ಮಾಡುತ್ತಿರುವ ಬಗ್ಗೆ ಪ್ರತಿಭಟಿಸಲಾಗಿದೆ ಎಂದು ವರದಿಯಾಗಿದೆ.

ನವದೆಹಲಿ— ಭಾರತ ಸೇವಕ ಸಮಾಜ ಸಂಸ್ಥೆಯ ಗಾಂಧಿ ಪಡೆಯುತ್ತಿರುವುದಕ್ಕೆ : ಅದು ಲೆಕ್ಕವಿಲ್ಲದ ಕಾರ್ಯಾಚರಣೆಯಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ರಾ ಜ ಧ ರ್ಮ

(ಮುಂದುವರಿದದ್ದು)

ರಾಜನು ನಂಬುಗೆಗೆ ಯೋಗ್ಯರಾದ ಮಂತ್ರಿ ಮೊದಲಾದ ಅಧಿಕಾರಿಗಳ ಮೂಲಕ ರಾಜ್ಯದಿಂದ ಪ್ರತಿ ವರ್ಷ ದೊರೆಯುಲಿಂಪ ಧಾನ್ಯಾದಿ ಭಾಗವನ್ನು (ಶೆರಿಗೆ) ಸಂಪಾದಿಸಬೇಕು : ಲೋಕದಲ್ಲಿ ತೆಂಗಿಯನ್ನು ಪಡೆಯುವಾಗ ಧರ್ಮ ನೀತಿಶಾಸ್ತ್ರಗಳನ್ನು ಅನುಸರಿಸಬೇಕು : ತನ್ನ ರಾಜ್ಯದ ಪ್ರಜೆಗಳಲ್ಲಿ ತಂದೆಯಂತೆ ಪ್ರೀತಿಯಿಂದ ವರ್ತಿಸಬೇಕು.

ಪ್ರಜೆಗಳನ್ನು ರಕ್ಷಿಸುತ್ತಿರುವ ರಾಜನು ತನ್ನ ಸಮಾನರಾಗಲೀ, ತಾಗಿಂತ ಹೆಚ್ಚಿನ ಬಲದಿಂದ ಉತ್ಕರ್ಷರಾದವನಾಗಲೀ, ಬಲದಿಂದ ಕಡಮೆಯಾದವನಾಗಲೀ ಯುದ್ಧಕ್ಕೆ ಕರೆದರೆ; ಕ್ಷತ್ರಿಯ ಧರ್ಮವನ್ನು ಯೋಚಿಸಿ ಯುದ್ಧಕ್ಕೆ ಹಿಂಜರಿಯಬಾರದು : (ಯುದ್ಧಕ್ಕೆ ಕರೆಯಲ್ಪಟ್ಟ ರಾಜನು ಯುದ್ಧಮಾಡಬೇಕೆಂಬ ಸ್ವಧರ್ಮವನ್ನು ತಿಳಿದು ಯುದ್ಧಮಾಡದೇ ಹಿಂತಿರುಗಬಾರದು)

ಯಾವ ಭಟನು ಯುದ್ಧದಲ್ಲಿ ಹೆದರಿ ರಣರಂಗದಿಂದ ಓಡಿಹೋಗುವಾಗ ಶತ್ರುಗಳಿಂದ ಕೊಲ್ಲಲ್ಪಡುತ್ತಾನೋ, ಅವನು ತನ್ನ ಯಜಮಾನನ ಪಾಪವನ್ನೆಲ್ಲಾ ಹೊಂದುವನು.

ಯಾವ ಭಟನು ಯುದ್ಧದಲ್ಲಿ ಹೆದರಿ ರಣರಂಗದಿಂದ ಓಡಿಹೋಗುವಾಗ ಶತ್ರುಗಳಿಂದ ಕೊಲ್ಲಲ್ಪಡುತ್ತಾನೋ ಅವನು ತನ್ನ ಯಜಮಾನನ ಪಾಪವನ್ನೆಲ್ಲಾ ಹೊಂದಿದವನು.

ಆನಿಂದ್ಯವೂ ಸನಾತನವೂ ಆದ ಕ್ಷತ್ರಿಯ ಯೋಧ ಧರ್ಮವನ್ನು ಶತ್ರುಗಳೊಡನೆ ಯುದ್ಧಮಾಡುತ್ತಿರುವ ಕ್ಷತ್ರಿಯನು ವಿಸರ್ಜಿಸಬಾರದು ; ಜಾತಿಯಲ್ಲಿ ಕ್ಷತ್ರಿಯನಲ್ಲದ ಅಂಸನೂ ಯುದ್ಧದಲ್ಲಿ ಈ ಧರ್ಮವನ್ನು ಅನುಸರಿಸಬೇಕು ; ಅಂಸನು ನಿತ್ಯದಲ್ಲಿಯೂ ದಂಡೋಪಾಯಕ್ಕೆ ಅಗತ್ಯವಾದ ಶಕ್ತಿಯಂಗ ಸೈನ್ಯಾದಿಗಳಿಗೆ ಯುದ್ಧ ವಿದ್ಯೆಯ ಅಭ್ಯಾಸ ಮಾಡಿಸುತ್ತಿರಬೇಕು : ತನಗೆ ಅವಶ್ಯಕವಾದ ಶಸ್ತ್ರವಿದ್ಯೆಯಿಂದ ಪರಾಕ್ರಮ ಪ್ರದರ್ಶಿಸುತ್ತಿರಬೇಕು : ಮಂತ್ರಾಲೋಚನೆ-ಆಚಾರ-ಚೇಷ್ಟಾದಿ ತನ್ನ ಕಾರ್ಯವನ್ನೆಲ್ಲಾ ಗುಟ್ಟಾಗಿರಿಸಬೇಕು. ಮತ್ತು ಶತ್ರುವಿನ ಛಿದ್ರ ಅಂದರೆ ದುರ್ವ್ಯಸನಾದಿಗಳನ್ನು ತಿಳಿದುಕೊಳ್ಳಲು ಯತ್ನಿಸಬೇಕು.

ಮಂತ್ರಿ ಮೊದಲಾದವರಲ್ಲಿ ಎಂದಿಗಾದರೂ ಕಪಟ ವರ್ತನವನ್ನು ತೋರಿಸಬಾರದು : ಏಕೆಂದರೆ ಅಧಿಕಾರಿಗಳಲ್ಲಿ ಕಪಟೋಚಾರಣೆಯಿಂದ ಅವರ ವಿಶ್ವಾಸವನ್ನು ಕಳೆದುಕೊಳ್ಳುವನು ; ಧರ್ಮರಕ್ಷಣೆಕ್ಕಾಗಿ ಸತ್ಯದ ವ್ಯವಹಾರವನ್ನೇ ಮಾಡತಕ್ಕದ್ದು ; ತನ್ನ ಪಕ್ಷವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಶತ್ರುಗಳು ತನ್ನ ರಾಜ್ಯದಲ್ಲಿ ನಡೆಯಿಸಬಹುದಾದ ಭೇದೋಪಾಯ ರೂಪವಾದ ಮಾಯೆಯನ್ನು ಚಾರಾ ಮೂಲಕ ತಿಳಿಯಬೇಕಷ್ಟೆ.

[ಮನುಸ್ಮೃತಿಯಿಂದ ಸಂಗ್ರಹಿಸಿದೆ]

ಮುಂದುವರಿಯುವುದು

ಆ. ನ. ಅಯ್ಯಂಗಾರ್

ಶ್ರೀ ರಾಮಸೇವಾ ಸಮಿತಿ, ರಾಜಾಂಗಣ ಅಗ್ರಹಾರ

— 15-4-65 ರ ಕಾರ್ಯಕ್ರಮ —

ಸಂಗೀತ ವಿದುಷಿಯರಾದ ಆರ್ ಕೆ ಪದ್ಮ ಮತ್ತು ಆರ್ ಸ.ಶೀಲರ ಗಾಯನ :
ಆಲ್ ವಿಲ್ ಹೆಚ್ ಎ ಕೃಷ್ಣಾಚಾರ್ಯರ ಪಿಟೀಲು : ವಿದುಷಿ ಶೈಲಜರ ಮೃದಂಗ.

Help The Gorakshana

" ಗೋರಕ್ಷಣಾ " ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಪೂರ್ವಾಶ್ರಮದಲ್ಲಿ ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಗಳವರ ಅಪಾರ ಅನುಗ್ರಹ ಪೆಪಡೆದಿರುವ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಲೀಯಪಾಠ, ಪಶುವೈದ್ಯ ವಿಷಯಗಳಿಂದ ಕೂಡಿದ ಏಕೈಕ ದೃಷ್ಟಾಂತ ಮಾಸಪತ್ರಿಕೆ.

ಮುದ್ರಾಲಾಂಡ್ ಯಶಸ್ವಿ 3 ನೇ ವಾರ

ಬೊಂಬಾಯಿನಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯದ್ಭುತ ಹಿಂದಿ ಚಿತ್ರ ರತ್ನ

ಬಹು ಬೇಟಿ ★ Bahu Beti

ತಾರಾ- ಅಶೋಕಕುಮಾರ್, ಮಾಲಾಸಿನ್ಹಾ, ಜಾಯ್ ಮುಖರ್ಜಿ, ಮೆಹಮೂದ್

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— ಜಯಪ್ರದ 2 ನೇ ವಾರ

ಅತ್ಯದ್ಭುತ ಕಮಿಲು ಚಿತ್ರ — ದಿನಕ್ಕೆ ಆರು ಆಟಗಳು

ಪ್ರೇಮಪೂಜೆಕ್ಕು ವಂದ ಮಲರ್

ತಾರಾಗಣ— ಜೆಮಿನಿ ಗಣೇಶನ್, ಸಾವಿತ್ರಿ, ಮನೋರಮಾ, ಮುತ್ತುರಾಮನ್

SHAKTI

SUDHA

A Superb Tonic



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ !

Edited, Printed & Published by the Proprietor
Dharma Prachara Nirata M S Krishna Rao
at the Satyavedi Press Chamarajapuram Mysore 4